# ಕನ್ನಡ ಕುಲದೈವದ ಒಂದು ಪುಟ್ಟ ವಿಗ್ರಹ

ಕೆ.ವಿ.ಸುಬ್ಬಣ್ಣ

## ಸುಲಭ ನೀತಿಕಥೆಯಲ್ಲ


ಕನ್ನಡವಲ್ಲಿ 'ಗೋವಿನ ಹಾಡು' ಮತ್ತು 'ಕೆರೆಗೆ ಹಾರ' ಎಂಬೆರಡು ಜಾನಪದ ಕಿರು ಕಥನಗೀತೆಗಳು ಪ್ರಸಿದ್ಧವಾಗಿವೆ. ಕನ್ನಡ ನವೋದಯದ ಮುಂಬೆಳಗಿನಲ್ಲಿ ಆಚಾರ್ಯ ಬಿ.ಎಂ.ಶ್ರೀ. ಅವರು, ಕನ್ನಡ ಸಾರಸ್ವತ ಸಾರವನ್ನು ಸಂಕಲಿಸಿ ಹೊರತಂದ 'ಕನ್ನಡ ಬಾವುಟ'ದಲ್ಲಿ ಇವೆರಡೂ ಪ್ರಮುಖವಾಗಿ ಕೂಡಿ ಕೊಂಡಿವೆ. ಇತ್ತೀಚೆಗೆ ಕೀರ್ತಿ ನಾಥ ಕುರ್ತುಕೋಟಿಯವರು ರಚಿಸಿದ 'ಕನ್ನಡ ಸಾಹಿತ್ಯ ಸಂಗಾತಿ'ಯಲ್ಲಿ, ಪಂಪ-ರನ್ನ-ಬಸವ-ಅಲ್ಲಮ-ಹರಿಹರ-ಕುಮಾರವ್ಯಾಸ ಈ ಪ್ರಸಿದ್ಧರ ಕೃತಿಯ ಜೊತೆ ಇವೆರಡಕ್ಕೂ ಸ್ಥಾನ ಕೊಟ್ಟಿದ್ದಾರೆ. ಪ್ರಸಿದ್ಧವಿರುವ 'ಗೋವಿನ ಹಾಡು' ದಕ್ಷಿಣ ಕರ್ನಾಟಕ ದಲ್ಲಿ ಪ್ರಚಲಿತವಿದ್ದುದಾಗಿ ಕಾಣಿಸುತ್ತದೆ.

'ಗೋವಿನ ಹಾಡು' ಪದ್ಯವು ಚಿಕ್ಕದೊಂದು ಕಥೆ ಯನ್ನು ನೇರವಾಗಿ ಹೇಳುತ್ತದೆ. ಇಲ್ಲಿನ ಚಿಕ್ಕ ಸರಳ ಕಥೆ, ಸಂಕ್ಷಿಪ್ತ ಸರಳ ನೇರ ಕಥನ, ಜಾನಪದ ಸರಳ ಶೈಲಿ ಮತ್ತು ಮುಖ್ಯವಾಗಿ, ಪ್ರಾಣಿಗಳೇ ಪಾತ್ರವಾಗಿರು ವುದು ಹಾಗೂ 'ಸತ್ಯವೇ ನಮ್ಮ ತಾಯಿ ತಂದೆ' ಇತ್ಯಾದಿ ನೇರ ನೀತಿಸಂದೇಶವೆಂಬಂತೆ ತೋರುವ ಸಾಲುಗಳು - ಇವು ನಮ್ಮನ್ನು ಹಾದಿ ತಪ್ಪಿಸುತ್ತವೆ. ಸಾಮಾನ್ಯವಾಗಿ ಇದನ್ನು ನಾವು ಒಂದು ಸರಳ ನೀತಿಪದ್ಯ, ಮಕ್ಕಳ ಪದ್ಯವೆಂದು ಪರಿಗಣಿಸಿಬಿಡುತ್ತೇವೆ. ಅಂಥ ಸುಲಭ ನೀತಿಕಥೆಯಲ್ಲ ಇದು ಎನ್ನುವುದು ತಿಳಿದೀತು.

'ಗೋವಿನ ಕಥೆ'ಯು ಒಂದು ಕಥೆಯನ್ನು ನಿರೂಪಿಸಿ ಹೇಳುವ ಬದಲು, ದೃಶ್ಯಗಳಲ್ಲಿ ಸಾಕ್ಷಾತ್ ಕಾಣಿಸಿಕೊಡುತ್ತದೆ ಎಂಬುದನ್ನು ಗಮನಿಸಬೇಕು. ಇಡೀ ಕಥೆಯು ಚಲನಚಿತ್ರವೆನ್ನುವ ಹಾಗೆ, ನಾಲ್ಕೇ ಅತಿ ಸಂಕ್ಷಿಪ್ತ ದೃಶ್ಯಗಳಲ್ಲಿ ಅಭಿನಯಗೊಂಡು, ಖಚಿತ ವಾಗಿ ಮತ್ತು ನಿಚ್ಚಳವಾಗಿ ಕಣ್ಣಿಗೆ ಕಟ್ಟುತ್ತದೆ.

## ಮೊದಲ ದೃಶ್ಯ - 'ಧರಣಿಮಂಡಲ ಮಧ್ಯದೊಳಗೆ'

ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದ ಏಳನೇ ಅಂಕದ ಪ್ರಾರಂಭಕ್ಕೆ, ದುಷ್ಯಂತ ಮಾತಲಿಯರು ವಾಯುಮಾರ್ಗದಲ್ಲಿ ಬರುತ್ತ, ಕೆಳಗೆ ಹೇಮಕೂಟಕ್ಕಿಳಿಯುವುದನ್ನು ಚಿತ್ರವತ್ತಾಗಿ ಕಾಣಿಸುವ ಎರಡುಮೂರು ಚಿತ್ತಾಪಹಾರಕ ವೃತ್ತಗಳಿವೆ. 'ಗೋವಿನ ಹಾಡಿ'ನ ಮೊದಲ ದೃಶ್ಯಾವಳಿಯು ಅದನ್ನು ನೆನಪಿಸುತ್ತದೆ. 'ಧರಣಿ ಮಂಡಲ' - **'ಮಧ್ಯದೊಳಗೆ ಮೆರೆಯುತಿಹ ಕರ್ಣಾಟಕ ದೇಶ'** - ಅನಂತರ, **'ಗಿರಿಗಳೆಡೆಯಲಿ ಅಡವಿನಡುವೆ'** - **'ದೊಡ್ಡಿಯ ಮಾಡಿಕೊಂಡು ಮೆರೆವ ಕಾಳಿಂಗನೆಂಬ ಗೊಲ್ಲ'** - ಹೀಗೆ, ಮೇಲಿನ ಆಕಾಶ ನೋಟದಿಂದ ಒಂದೊಂದೇ ಪದ-ಕ್ಷಣಗಳಲ್ಲಿ ವೇಗ ದಿಂದ ಕೆಳಕ್ಕಿಳಿಯುತ್ತ, ಗೊಲ್ಲದೊಡ್ಡಿಯ ಬಳಿ ನಾವು ನಿಲ್ಲುತ್ತೇವೆ. ಆಮೇಲೆ, **'ಗೊಲ್ಲ ದೊಡ್ಡಿಯೊಳಿರುವ ಹಸುಗಳು ಎಲ್ಲ ಬೆಟ್ಟದ ಮೇಲೆ ಮೇಯುತ ಹುಲ್ಲನೊಳ್ಳೆಯ ನೀರ ಕುಡಿಯುತ ಅಲ್ಲಿ ಮೆರೆದುವರಣ್ಯದಿ'** - ಎಂಬ ಒಂದು ಬೀಸುನೋಟವನ್ನು ಕಾಣುತ್ತೇವೆ.



ಅನಂತರ, ಆ ಗೊಲ್ಲದೊಡ್ಡಿಯ ಒಂದು ಬೆಳಗಿನ ದಿನ ಚರಿಯ ಬಿಡುನೋಟವನ್ನು ಕಾಣುತ್ತೇವೆ. **'ಉದಯಕಾಲ ದೊಳೆದ್ದು ಗೊಲ್ಲನು ನದಿಯ ಸ್ನಾನವ ಮಾಡಿಕೊಂಡು ಮುದದಿ ತಿಲಕವ ಹಣೆಯೊಳಿಟ್ಟು..... ಎಳೆಯ ಮಾವಿನ ಮರದ ಕೆಳಗೆ ಕೊಳಲ ನೂದುತ.. ಬಳಸಿನಿಂದ ತುರುಗಳನ್ನು ಬಳಿಗೆ ಕರೆದನು ಹರುಷದಿ.'** ಹಾಗೆ ಪ್ರೀತಿಯಿಂದ ಗೋವುಗಳನ್ನು ಹೆಸರು ಹಿಡಿದು ಬಳಿಗೆ ಕರೆದು, ಅವುಗಳ ಹಾಲು ಕರೆದುಕೊಳ್ಳಲು, **'ಅಲ್ಲಿ ತುಂಬಿತು ಬಿಂದಿಗೆ'**.

## ಎರಡನೆಯ ದೃಶ್ಯ- 'ಹಬ್ಬಿದಾ ಮಲೆ ಮಧ್ಯದೊಳಗೆ'


ತಟ್ಟನೆ ದೃಶ್ಯ ಪಲ್ಲಟಗೊಳ್ಳುತ್ತದೆ. **'ಹಬ್ಬಿದಾ ಮಲೆ ಮಧ್ಯದೊಳಗೆ'** (ಹಿಂದೆ ಧರಣಿಮಂಡಲ ಮಧ್ಯದೊಳಗೆ - ಎಂದಂತೇ) ಬೆಟ್ಟದ ಕಿಬ್ಬಿಯಲ್ಲಿ **'ಅರ್ಬುತಾನೆಂದೆಂಬ ವ್ಯಾಘ್ರನು'** **'ಹಸಿಹಸಿದು ಅಬ್ಬರಿಸು ತ್ತಿರುವ'** ಸಮೀಪ ದೃಶ್ಯ. ಬೆಟ್ಟದ ತಪ್ಪಲಿನಿಂದ ಕೆಳಗೆ ಕಿಬ್ಬಿಗಿಳಿ ದಿದ್ದೇವೆ; ಮುಂಜಾನೆಯು ಹೋಗಿ ಉರಿಸಂಜೆ ಬಂದಿದೆ. ಮೇವು ಮುಗಿಸಿದ ಹಸುಗಳು ಆ ಸಿರಿ ಸಂಜೆಯ ಸೊಬಗಿನಲ್ಲಿ

ಕೊಟ್ಟಿಗೆಗೆ ಮರಳುತ್ತಿರಲು, 'ಸಿಡಿದು ರೋಷದಿ ಮೊರೆಯುತಾ ಹುಲಿ ಘುಡುಘುಡಿಸಿ ಭೋರಿಡುತ ಛಂಗನೆ ತುಡುಕು'ತ್ತದೆ; 'ರಭಸಕಂಜಿ ಚೆದರಿ ಹೋದವು ಹಸುಗಳು'. ಆಮೇಲೆ, 'ಪುಣ್ಯಕೋಟಿ ಯೆಂಬ ಗೋವು ತನ್ನ ಕಂದನ ನೆನೆದುಕೊಂಡು ಮುನ್ನ ಹಾಲನು ಕೊಡುವೆನೆನುತ ಚೆನ್ನಾಗಿ ತಾ ಬರುತಿರೆ' ಹುಲಿಯು ಅದನ್ನು ಅಡ್ಡಗಟ್ಟುತ್ತದೆ; 'ನಿನ್ನ ಹೊಟ್ಟೆಯ ಸೀಳಿಬಿಡುವೆನು' ಎಂದು ಗರ್ಜಿಸುತ್ತದೆ. ಆಗ ಗೋವು, 'ಒಂದು ಬಿನ್ನಹ ಹುಲಿಯೆ ಕೇಳು ಕಂದನಿರುವ ದೊಡ್ಡಿಯಲ್ಲಿ ಒಂದು ನಿಮಿಷದಿ ಮೊಲೆಯ ಕೊಟ್ಟು ಬಂದು ಸೇರುವೆನಿಲ್ಲಿಗೆ' ಎಂದು ಬಿನ್ನವಿಸಿಕೊಳ್ಳುತ್ತದೆ. ಅದಕ್ಕೆ ಹುಲಿಯು, 'ನುಸುಳಿ ಹೋಗುವೆ ಮತ್ತೆ ಬರುವೆಯ ಹುಸಿಯನಾಡುವೆ' ಎಂದು ಸಂಶಯಿಸಿದಾಗ ಗೋವು, 'ಸತ್ಯವೇ ನಮ್ಮ ತಾಯಿ ತಂದೆ.... ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂದು ತನ್ನ ದೃಢ ವನ್ನು ಹೇಳಿಕೊಳ್ಳುತ್ತದೆ. ಹಿಂಸ್ರ ಹುಲಿಯ ಅಂತಃಕರಣವು ಸ್ಪಂದಿಸಿರಬೇಕು, ಅದು ಗೋವನ್ನು ಬಿಟ್ಟುಕೊಡುತ್ತದೆ.



## ಮೂರನೆಯ ದೃಶ್ಯ : ಕಾಳಿಂಗನ ಕೊಟ್ಟಿಗೆಯಲ್ಲಿ

ಮೂರನೆಯ ದೃಶ್ಯ. ಗೋವು ತನ್ನ ಕರುವಿಗೆ ಹೇಳಿಕೊಳ್ಳು ತ್ತಿದೆ; 'ಕೊಂದು ತಿನ್ನುವೆನೆಂಬ ಹುಲಿಗೆ ಚಂದದಿಂದ ಭಾಷೆಯಿತ್ತು ಕಂದ ನಿನ್ನನ್ನು ನೋಡಿ ಹೋಗುವೆನೆಂದು ಬಂದೆನು.' ಕರು: 'ಅಮ್ಮ ನೀನು ಸಾಯಲೇಕೆ ನಮ್ಮ ತಬ್ಬಲಿ ಮಾಡಲೇಕೆ ಸುಮ್ಮನಿಲ್ಲಿಯೆ ನಿಲ್ಲು.' ಗೋವು: 'ಕೊಟ್ಟ ಭಾಷೆಗೆ ತಪ್ಪಲಾರೆನು... ನಿಷ್ಠೆಯಿಂದಲಿ ಪೋಪೆನಲ್ಲಿಗೆ ಕಟ್ಟಕಡೆಗಿದು ಖಂಡಿತ.' ಕರು: 'ಆರ ಮೊಲೆಯನು ಕುಡಿಯಲಮ್ಮ ಆರ ಸೇರಿ ಬದುಕಲಮ್ಮ ಆರ ಬಳಿಯಲಿ ಮಲಗಲಮ್ಮ.' ಗೋವು ಒಡನಾಡಿ ಹಸುಗಳಲ್ಲಿ ಯಾಚಿಸುತ್ತದೆ: 'ಅಮ್ಮಗಳಿರ ಅಕ್ಕಗಳಿರ ಎನ್ನ ತಾಯೊಡಹುಟ್ಟುಗಳಿರ ನಿಮ್ಮ ಕಂದನೆಂದು ಕಾಣಿರಿ ತಬ್ಬಲಿಯನೀ ಕರುವನು... ಮುಂದೆ ಬಂದರೆ ಹಾಯಬೇಡಿ ಹಿಂದೆ ಬಂದರೆ ಒದೆಯಬೇಡಿ..' ಆಮೇಲೆ ಕರುವನ್ನು ಸಂತೈಸುತ್ತದೆ; 'ಕಟ್ಟ ಕಡೆಯಲಿ ಮೇಯಬೇಡ ಬೆಟ್ಟದೊತ್ತಿಗೆ ಹೋಗಬೇಡ ದುಷ್ಟ ವ್ಯಾಘ್ರನು ಹೊಂಚುತಿರವನು' ಎಂದು ಬುದ್ಧಿ ಹೇಳುತ್ತದೆ. ಕಡೆಯಲ್ಲಿ, 'ತಬ್ಬಲಿಯು ನೀನಾದೆ ಮಗನೆ ಹೆಬ್ಬುಲಿಯ ಬಾಯನ್ನು ಹೋಗುವೆ ಇಬ್ಬರಾ ಋಣ ತೀರಿತೆಂದು ತಬ್ಬಿಕೊಂಡಿತು ಕಂದನ.'



## ನಾಲ್ಕನೆಯ ದೃಶ್ಯ– ಹುಲಿಯ ಗವಿಯ ಬಾಗಿಲಿನಲ್ಲಿ

ನಾಲ್ಕನೆಯ ದೃಶ್ಯ: 'ಸಾವಕಾಶವ ಮಾಡದಂತೆ' ಗೋವು ಹುಲಿಯ ಗವಿಯ ಬಾಗಿಲಿಗೆ ಬಂದು ನಿಂತಿದೆ; 'ಖಂಡವಿದೆ ಕೋ ಮಾಂಸವಿದೆ ಕೋ ಗುಂಡಿಗೆಯ ಬಿಸಿ ರಕ್ತವಿದೆ ಕೋ ಚಂಡವ್ಯಾಘ್ರನೆ ನೀನಿದೆಲ್ಲವನುಂಡು ಸಂತಸ ದಿಂದಿರು' ಎನ್ನುತ್ತಿದೆ. ಆಗ, 'ಪುಣ್ಯಕೋಟಿಯ ಮಾತ ಕೇಳಿ ಕಣ್ಣನೀರನು ಸುರಿಸಿ ನೊಂದು ಕನ್ನೆಯಿವಳನು ಕೊಂದು ತಿಂದರೆ ಮೆಚ್ಚನಾ ಪರಮಾತ್ಮನು' ಎಂಬ ಭಾವವು ಮೊಳೆದು ಹುಲಿಯು, 'ಎನ್ನ ಒಡಹುಟ್ಟಕ್ಕ ನೀನು ನಿನ್ನ ಕೊಂದು ನಾನೇನ ಪಡೆವೆನು ಎನ್ನುತಾ ಹುಲಿ ಹಾರಿ ನೆಗೆದು ತನ್ನ ಪ್ರಾಣವ ಬಿಟ್ಟಿತು'. ಈಗ ಹುಲಿಗೆ ಹಸುವು 'ಒಡಹುಟ್ಟಿದ



**ಅಕ್ಕ'** ನಾಗಿ ಕಾಣಿಸುತ್ತದೆ. ಹಿಂದೆ ಗೋವು ಹೇಳಿದ, **'ಮೆಚ್ಚನಾ ಪರಮಾತ್ಮನು'** ಎಂಬ ಅದೇ ಮಾತುಗಳನ್ನು ಈಗ ಹುಲಿಯೂ ಮರುದನಿಗೊಡುವ ತೆರದಲ್ಲಿ, ಹೇಳುತ್ತದೆ. **'ಹುಲಿ ಹಾರಿನೆಗೆದು ತನ್ನ ಪ್ರಾಣವ ಬಿಟ್ಟಿತು'** ಎಂದರೆ ಅದು ಆತ್ಮಹತ್ಯೆ ಮಾಡಿಕೊಂಡಿತೆ? ಕವಿತೆಯ ಸಾಲು ಆತ್ಮಹತ್ಯೆಯ ಕಷ್ಟಪ್ರಯತ್ನವನ್ನು ಧ್ವನಿಸದೆ ಸಹಜ ಸುಲಭದಲ್ಲಿ ಸಾವನ್ನು ನಿರೂಪಿಸುತ್ತದೆ.

### ತೀವ್ರ ಸ್ಪಂದಕ ಶೋಕ

ಸೋಂಪು ನೆಮ್ಮದಿಗಳನ್ನು ಚೆಲ್ಲಿ ಸೂಸುತ್ತಿರುವಂತೆ ಪ್ರಾರಂಭವಾದ ಕಥೆಯು ಸಿಡಿದ ಸಿಡಿಲಿನಂಥ ಆಘಾತದಿಂದ ತಲ್ಲಣಿಸುತ್ತದೆ; ಶೋಕದ ಮಡುವಿನಲ್ಲಿ ಮುಳುಗಿ ಹೋಗುತ್ತದೆ; ಮತ್ತು ಅಂತಿಮವಾಗಿ, ಪ್ರೀತಿಯ ಚೆಲ್ಲಿ ಸೂಸುತ್ತಿರುವ ಶಾಂತಿಯಲ್ಲಿ ಮುಕ್ತಾಯಗೊಳ್ಳುತ್ತದೆ.

ಇಡೀ ಕನ್ನಡ ಸಾಹಿತ್ಯ ರಾಶಿಯನ್ನೇ ನೋಡುವಾಗಲೂ ಇಷ್ಟು ಹ್ರಸ್ವದಲ್ಲಿ, ಇಷ್ಟು ಚಿತ್ರವತ್ತಾದ ಮತ್ತು ಇಷ್ಟು ಖಚಿತ ದೃಶ್ಯಗಳಿಂದ ಒಂದು ಆಖ್ಯಾನವನ್ನು ನಿರ್ಮಿಸಿದ ಉದಾಹರಣೆಗಳು ಹೆಚ್ಚು ಸಿಕ್ಕಲಿಕ್ಕಿಲ್ಲ. ಪಂಪನ 'ಆದಿಪುರಾಣ'ದಿಂದ ಮೊದಲುಗೊಂಡು ನಮ್ಮ ಮಾರ್ಗಸಾಹಿತ್ಯದ ಅನೇಕ ಕೃತಿಗಳಲ್ಲಿ ಬರುವ ಅನೇಕಾನೇಕ ಕಿರು ಆಖ್ಯಾಯಿಕೆಗಳಿವೆ; ಅವುಗಳಲ್ಲಿ ಶ್ರೇಷ್ಠವಾದವುಗಳ ಜೊತೆ ಹೆಗಲೆಣೆಯಾಗಿ ನಿಲ್ಲಬಲ್ಲ ಆಖ್ಯಾನ ಇದು. ಇಲ್ಲಿನ ಮೂರನೆಯ ದೃಶ್ಯದಲ್ಲಿನ ಶೋಕವು ಅದೆಷ್ಟು ತೀವ್ರ ಸ್ಪಂದಕವೆಂಬುದನ್ನು ಕನ್ನಡದ ಮಕ್ಕಳೆಲ್ಲರೂ ತಪ್ಪದೆ ಅನುಭವಿಸಿಕೊಂಡಿದ್ದಾರೆ. ಇಷ್ಟು ಸಂಕ್ಷೇಪದಲ್ಲಿ ಹೀಗೆ ತೀವ್ರವಾಗಿ ಉದ್ಬೋಧಗೊಳ್ಳುವ ಶೋಕವನ್ನು ಕೂಡಾ ಇಡೀ ಕನ್ನಡಸಾಹಿತ್ಯದ ವ್ಯಾಪ್ತಿಯಲ್ಲೂ ಹೆಚ್ಚು ಕಡೆಗಳಲ್ಲಿ ಕಾಣಲಾರೆವು. ಇದಕ್ಕೂ ಮಹತ್ವದ್ದೆಂದರೆ, ಭಾವಲಂಪಟವಾಗಿಬಿಡಬಹುದಾಗಿದ್ದ ಇಲ್ಲಿನ ಕಡುಶೋಕವು, ಒಟ್ಟೂ ಕಥೆಯ ಅಭಿಜಾತ ಗಾಂಭೀರ್ಯದಲ್ಲಿ ಮಹತ್ತರವಾದ ಔಚಿತ್ಯವನ್ನು ಪಡೆದುಕೊಂಡಿದೆ ಎನ್ನುವುದು.

### "ವಿಕೃತಿ" ಯೆದುರು "ಪ್ರಕೃತಿ" ಯ ವಿಜಯ

ಬೆಟ್ಟದ ತಪ್ಪಲಲ್ಲಿ ಅಡವಿ ಬದಿಗೆ ಬೇಸಾಯ ಗೋವಳಿಗೆಗಳನ್ನು ಮಾಡಿಕೊಂಡು, ಬದುಕುತ್ತಿರುವ ಗ್ರಾಮೀಣ ಸಮುದಾಯವು, (ಮಾರ್ಕ್ಸ್ ಹೇಳುವಂತೆ, 'ಹಸುಗಳನ್ನೂ ಮಂಗಗಳನ್ನೂ ಪೂಜಿಸುವ these idyllic Village') ಮಣ್ಣು ನೀರು ಮರಗಿಡ ಪಶುಪಕ್ಷಿಗಳ ನೇರ ನಂಟಿನಲ್ಲಿ, ಜಡನಿಶ್ಚಲವೆನಿಸುವಷ್ಟು ನೆಮ್ಮದಿಯಲ್ಲಿ ಬಾಳಿಕೊಂಡಿರುತ್ತದೆ. ಅಲ್ಲೇ ಕೆಳಗೆ ಕಿಬ್ಬಿಯಲ್ಲಿ ಹುಲಿಯು ಪ್ರತ್ಯಕ್ಷವಾಗುವುದೆಂದರೆ, ಪರಂಪರೆಯ ಆಸ್ತಿಕತೆಯ ಅಸ್ತಿವಾರವನ್ನು ನಂಬಿಕೊಂಡಿರುವ ಆ ಸಮುದಾಯಕ್ಕೆ ದೊಡ್ಡ ಆಘಾತವೇ. ದೈವಸೃಷ್ಟಿಯಲ್ಲಿ ಈ ಕ್ರೌರ್ಯ ಹಿಂಸೆಗಳು ಯಾಕೆ ಸೃಷ್ಟಿಗೊಂಡವು? ಈ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ. ಆದರೆ ಬದುಕನ್ನು ತಾಳ್ಮೆಯಿಂದ ಆರಯ್ದು ನೋಡಿಕೊಳ್ಳುವವರಿಗೆ, ಇನ್ನೊಂದು ಆಶ್ಚರ್ಯಕರವಾದ ಸಂಗತಿಯೂ ಕಂಡೀತು. ಅದೆಂದರೆ – ಹುಲಿ ಹಿಂಸೆ ಕ್ರೌರ್ಯ ಕೇಡುಗಳು ಅನಾದಿಕಾಲದಿಂದ ಇರುತ್ತಲೇ ಬಂದಿದ್ದರೂ ಹಸು ಹುಲ್ಲೆಗಳ ಕುಲವು ನಾಶವಾಗದೆ ಉಳಿದು ಬಂದಿದೆಯಲ್ಲ – ಎಂಬುದು.

ಸೃಷ್ಟಿಯಲ್ಲಿ ಬಲಿಷ್ಠವಾದ ಕ್ರೂರ ಪ್ರಾಣಿಗಳ ಜತೆಗೆ ಅಲ್ಪಜೀವಿ–ಅಣುಜೀವಿಗಳಾದ ದುರ್ಬಲ ಸಾಧು ಪ್ರಾಣಿಗಳೂ ಅನಾದಿ ಕಾಲದಿಂದಲೂ ಬಾಳಿ ಬಂದಿವೆ; ಕಣ್ಣಿಗೂ ಕಾಣಿಸದ ಅಸಂಖ್ಯಾತ ಕ್ರಿಮಿಗಳೂ ಕೂಡ ನಾಶವಾಗದೆ ಉಳಿದುಬಂದಿವೆ. ಮನುಷ್ಯ ಸಮಾಜದಲ್ಲೂ ಶಕ್ತಿ ಸಾಮರ್ಥ್ಯ ಬಲವಂತಿಕೆಗಳಿರುವವರ ನಡುವೆ, ಬಾಲರು ವೃದ್ಧರು ದುರ್ಬಲರು ರೋಗಗ್ರಸ್ತರು ವಿಕಲಾಂಗರು ವಿಕಲಮತಿಗಳು ಕೂಡ ಬದುಕಿಕೊಂಡಿರುತ್ತಾರೆ. **ಅಂದರೆ, ಕಿರುಕೀಟವೊಂದರಲ್ಲೂ ಬದುಕಬಲ್ಲ ಛಲವಿದೆ, ಸತ್ತ್ವವಿದೆ. ಸಾವು ಕೂಡಾ ಆ ಸತ್ತ್ವವನ್ನು ನಾಶಮಾಡಲಾರದು.** ಯಾಕೆಂದರೆ, ಸಾವು ಬೆಳಗ್ಗೆ ರಾತ್ರಿ ಸಂಭವಿಸುತ್ತಲೇ ಇರುತ್ತಿದ್ದರೂ, ಬದುಕಿಗೆ, ಪ್ರಾಣಸತ್ತ್ವಕ್ಕೆ ಅಪೋಹವಿಲ್ಲ; ಪ್ರಾಣವು ಒಂದಲ್ಲ ಒಂದು ಗೂಡು ಹುಡುಕಿಕೊಂಡು ಬಾಳುತ್ತ ಹೋಗುತ್ತದೆ. ('ಹಾಳಾದರೂ ಪ್ರಾಣಿ

ಹೂಳಿದ ಅವನೆಲುಬು ಬಾಳೇವು ಅಂತಾವ ಮಣ್ಣು ತಿನ್ನುತ್ತ' ಎಂದು ಜಾನಪದ ಗೀತೆಯೊಂದು ಹೇಳುತ್ತದೆ) **ಸಾವು ಮತ್ತು ಕೇಡು ಕ್ರೌರ್ಯಗಳು ಬದುಕನ್ನು ವಿಚಲಿತಗೊಳಿಸಬಲ್ಲವಲ್ಲದೆ ಬದುಕಿನ ಸತ್ತ್ವವನ್ನು ನಾಶಮಾಡಲಾರವು. ಕ್ರೌರ್ಯವು ಪ್ರಾಣಿಯನ್ನು ಕೊಲ್ಲಬಲ್ಲುದಲ್ಲದೆ ಪ್ರಾಣವನ್ನು ಕೊಲ್ಲಲಾರದಲ್ಲ? ಅಂದರೆ, ಪ್ರಾಣವು 'ಪ್ರಕೃತಿ'; ಸಾವು–ಕೇಡು–ಕ್ರೌರ್ಯಗಳು 'ವಿಕೃತಿ'. ಅಂತಿಮವಾಗಿ, 'ಪ್ರಾಣ'ದ ಎದುರು ಸಾವು ಕೇಡು ಹಿಂಸೆಗಳಿಗೆ ಅಸ್ತಿತ್ವವೇ ಇಲ್ಲ.**

**ಪ್ರಾಣತತ್ತ್ವದ ಅರಿವು**

ಹುಲಿಯೆಂಬ ಪ್ರಾಣಿಯು ಹಸುವೆಂಬ ಪ್ರಾಣಿಯನ್ನು ಕೊಲ್ಲುತ್ತದೆ, ನಿಜ. ಆದರೆ ಈ ಎರಡೂ ಪ್ರಾಣಿಗಳಲ್ಲಿರುವ **'ಪ್ರಾಣ'** ಒಂದೇ, ಅಖಂಡವಾದದ್ದು. ಪ್ರಾಣ–ಪ್ರಾಣಗಳ ನಡುವೆ ಭಿನ್ನತೆಯಿಲ್ಲ, ವೈರವಿಲ್ಲ. ಆದ್ದರಿಂದ ಈ ಪ್ರಾಣಿಗಳು ಮುಖಾ ಮುಖಿಯಾಗುವಾಗ, ಒಂದು ತನ್ನ ಪ್ರಾಣಸತ್ತ್ವದಿಂದ ಇನ್ನೊಂದರ ಪ್ರಾಣಸತ್ತ್ವವನ್ನು ಮುಖಾಮುಖಿಯಾಗಿಸಿಕೊಳ್ಳಲು, ಅನುಸಂಧಾನ ಮಾಡಿಕೊಳ್ಳಲು ಸಾಧ್ಯವಾದರೆ, ತಮ್ಮ ಆಳದ ಏಕತ್ವವು ಅರಿವಾಗಬೇಕಲ್ಲ? ಆಗ, ಹಿಂಸೆ ಕೇಡುಗಳೆಂಬ ವಿಕಲ್ಪಗಳು ಕರಗಿ ಹೋಗಬೇಕಲ್ಲ?

ಯಾವುದೊಂದು ಜೀವಿಯು ಪ್ರಾಣತತ್ತ್ವದ ಅರಿವನ್ನು ಪಡೆದುಕೊಂಡರೆ, ಆಮೇಲೆ ಅದು ಕೇವಲ ಪ್ರೀತಿಯ ಸೆಲೆಯಾಗುತ್ತದೆ; ಕೇಡು ಹಿಂಸೆಗಳ ವಿಕಾರಗಳನ್ನು ಕೆಲಮಟ್ಟಿಗೆ ನಿಯಂತ್ರಿಸುತ್ತದೆ; ಪುಣ್ಯಕಾರಿಯಾಗುತ್ತದೆ. 'ಗೋವಿನಹಾಡಿ'ನಲ್ಲಿ ಉಳಿದ ಹಸುಗಳು ಬೆದರಿ ಚೆದರಿ ಓಡಿದರೆ, **'ಪುಣ್ಯಕೋಟಿ'** ಯೆಂಬ ಹಸುವು ತನಗಿರುವ ಅರಿವಿನಿಂದ ನಿರ್ಭಯವಾಗಿ ಹುಲಿಯನ್ನು ಎದುರಿಸುತ್ತದೆ; ಅದಕ್ಕೆ 'ಸತ್ಯ'ದ ಮಾತನ್ನು ಹೇಳುತ್ತದೆ. ಇಲ್ಲಿ ಗೋವು ಹೇಳುವ 'ಸತ್ಯ' ಯಾವುದು ಎನ್ನುವುದನ್ನು ಸರಿಯಾಗಿ ಗಮನಿಸಬೇಕು. **'ಆಡಿದ ಮಾತಿಗೆ ತಪ್ಪಬಾರದು'** ಎಂದದ್ದೇ ಸತ್ಯವಲ್ಲ; ಅದು ಸತ್ಯದಿಂದ ಸೂಚಿತವಾಗಿರುವ ನೀತಿ ಮತ್ತು ಅದರ ಅರಿವಿನಿಂದ ಬರುವ ನಡಾವಳಿ. ಗೋವು ಕಂಡಿರುವ ಸತ್ಯ ಇದು – **ಕ್ರೌರ್ಯ ಅಥವಾ ಸಾವು ಪ್ರಾಣದ ಅಸ್ತಿತ್ವವನ್ನು ನಾಶಮಾಡಲಾರದು** ಎನ್ನುವುದು. ಅದನ್ನೇ ಗೋವು, **'ಸತ್ಯವೇ ನಮ್ಮ ತಾಯಿ ತಂದೆ'** ಎಂದು ವರ್ಣಿಸುತ್ತದೆ.

ಹಸುವು ಮರಳಿ ಬಂದು ಹುಲಿಯೆದುರು ನಿಂದು **'ಕೋ'** ಎಂದಾಗ, ಗೋವಿನ ಪ್ರಾಣಸತ್ತ್ವವು ಹೊರಚೆಲ್ಲುತ್ತದೆ ಮತ್ತು ಆ ಪ್ರಭೆಯಲ್ಲಿ ಹುಲಿಯ ಒಳಗಿನ ಪ್ರಾಣಸತ್ತ್ವವೂ ಎಚ್ಚರಗೊಳ್ಳುತ್ತದೆ. ಈ ಹಸುವು ತನ್ನ **'ಒಡಹುಟ್ಟು–ಅಕ್ಕ'** ಎಂಬ ಬೋಧೆಯಾಗುತ್ತದೆ. ಹಾಗೆ ಬೋಧೆಯಾದದ್ದೇ **'ಹುಲಿ ಹಾರಿ ನೆಗೆದು ತನ್ನ ಪ್ರಾಣವ ಬಿಟ್ಟಿತು'**. ಪ್ರಾಣ ಪ್ರಾಣಗಳ ನಡುವೆ ಪರಸ್ಪರ 'ಅಭಿಜ್ಞಾನ' (ಗುರುತು) ಉಂಟಾದಾಗ, ಕೇಡು ಕ್ರೌರ್ಯಗಳ ವಿಕಾರವು ತಾನಾಗಿ ಸತ್ತುಹೋಗುತ್ತದೆ. **'ಮೆಚ್ಚಿನಾ ಪರಮಾತ್ಮನು'** ಅಂತ ಹಿಂದೆ ಗೋವು ಹೇಳಿತ್ತು; ಹುಲಿಯು ತನಗೆ ಉಂಟಾದ ಅಭಿಜ್ಞಾನದಲ್ಲಿ **'ಮೆಚ್ಚಿನಾ ಪರಮಾತ್ಮನು'** ಎಂಬ ಭಾವ ಮರುದನಿಗೊಡುತ್ತದೆ. ಹುಲಿಯನ್ನು ಸಾಯಿಸಬೇಕಿರಲಿಲ್ಲ ಅಂತ ಕೆಲವರು ಹೇಳಿದ್ದುಂಟು. **ಇಲ್ಲಿ ಹುಲಿಯನ್ನು ಸಾಯಿಸಿಲ್ಲ, ಪ್ರಾಣದ ಅಭಿಜ್ಞಾನವಾದದ್ದೇ ಹುಲಿತನವು ತಾನಾಗಿ ಅನಿವಾರ್ಯವಾಗಿ ಕರಗಿ ಹೋಗಿದೆ.**

## ಕನ್ನಡ ಕುಲದೈವದ ಒಂದು ಪುಟ್ಟ ವಿಗ್ರಹ

**'ಅಹನ್ಯಹನಿ ಭೂತಾನಿ ಪ್ರವಿಶಂತಿ ಯಮಾಲಯಮ್, ಶೇಷಾಃ ಜೀವಿತುಮಿಚ್ಛಂತಿ ಕಿಮಾಶ್ಚರ್ಯಮ್ ಅತಃಪರಮ್'.**– *'ದಿನಾದಿನ ಜೀವಿಗಳು ಸತ್ತು ಯಮಸದನಕ್ಕೆ ಹೋಗುತ್ತಿರುವಾಗಲೂ ಉಳಿದಿರುವ ಜೀವಿಗಳೂ ಬಾಳಲು ಬಯಸುತ್ತಾರಲ್ಲ?'* ಎನ್ನುತ್ತಾನೆ, ಮಹಾಭಾರತದ ಧರ್ಮರಾಯ. ಮಾನವನ ದುರಂತ ಇದು ಎನ್ನಬಹುದು ಅಥವಾ ತದ್ವಿರುದ್ಧವಾಗಿ ಇದೇ ಬದುಕಿನ ದೊಡ್ಡ ಭರವಸೆ ಎಂದೂ ತಿಳಿಯಬಹುದು. ಧರ್ಮರಾಯನು ಇದನ್ನು ದುರಂತವೋ ಭರವಸೆಯೋ ಎಂದು ತರ್ಕ ಮಾಡುವುದಿಲ್ಲ. 'ಇದಕ್ಕಿಂತ ಇನ್ನಾವುದು ಆಶ್ಚರ್ಯ' ಎನ್ನುತ್ತಾನೆ; ಇದು ಅವನು ಕಂಡ 'ಆಶ್ಚರ್ಯಸತ್ಯ.' ಅಂಥದನ್ನು ಕಾಣಬಲ್ಲವನಾದುದಕ್ಕೇ ಅವನು ಧರ್ಮರಾಯ ಎನಿಸಿಕೊಂಡ. ಧರ್ಮರಾಯನನ್ನು ಪರಿಭಾವಿಸಿಕೊಂಡವರಿಗೆ, ತಾವು ಅವನಾಗಲಿಕ್ಕೆ ಸಾಧ್ಯವಾಗದಿದ್ದರೂ, ಅವನಿಂದ ಬಾಳುವೆಗೆ ಭರವಸೆಯ ಒಂದು ಹೊಳಹನ್ನು ಕಾಣಲಿಕ್ಕೆ ಸಾಧ್ಯವಾಯ್ತು. ಗೆಯ್ದು ಹೊಟ್ಟೆ ಹೊರೆದು, ಮಕ್ಕಳನ್ನು ಹೆತ್ತು ಹೊತ್ತು ಸಾಕಿ ಬೆಳೆಸಿ, ಬದುಕಿನ ತೊರೆಯನ್ನು ಹರಿಸಿಕೊಂಡು ಹೋಗುವ, ಅದು ಅನಿವಾರ್ಯ ಪವಿತ್ರ ಕರ್ತವ್ಯ ಮತ್ತು ದೈವವಿಧಿ ಅಂತ ಭಾವಿಸುವ ಸಂಸಾರಸ್ಥ ಆಸ್ತಿಕ ಮನಸ್ಸು ಅಸಂಖ್ಯಾತ ನಿತ್ಯಕ್ಷೋಭೆಗಳ ನಡುವೆ ಹಂತಹಂತದಲ್ಲೂ 'ಟ್ರ್ಯಾಜಿಕ್' ಅನ್ನು ಮೀರಿದ, ಭರವಸೆಯ ಹೊಳಹುಗಳ ಸೆಲೆಯನ್ನು ಕಂಡುಕೊಳ್ಳಬೇಕಾಗುತ್ತದೆ.

ಸಾಮಾನ್ಯ ಬದುಕಿನ ಅನುಭವದಲ್ಲಿ ಆಳವಾದ ಅರಿವೊಂದನ್ನು ಶೋಧಿಸಿ ದಕ್ಕಿಸಿಕೊಳ್ಳಲು ಹೆಣಗಿರುವ 'ಗೋವಿನ ಹಾಡ'ನ್ನು **'ಕೊಟ್ಟ ಮಾತಿಗೆ ತಪ್ಪಬಾರದೆನ್ನುವ'** ನೀತಿಕಥೆಯಾಗಿ ಮಾತ್ರ ನೋಡಬಾರದು. ಹಾಗೇ, ಸರಳತೆ ಮತ್ತು ಪ್ರಾಣಿ ಪಾತ್ರಗಳಿರುವುದಕ್ಕಾಗಿ ಇದನ್ನು ಬರಿಯ ಮಕ್ಕಳ ಕಥೆಯಾಗಿಯೂ ಭಾವಿಸಬಾರದು. (ನೀತಿ ಕಥೆ–ಮಕ್ಕಳ ಕತೆಯಾಗಿದ್ದರೆ ಹುಲಿಯು ಸಾಯಬೇಕಾದ್ದಿರಲಿಲ್ಲ) ಈ ಹಾಡನ್ನು, ಸೃಷ್ಟಿಸಿದ ನೂರಾರು ವರ್ಷಗಳ ಹಿಂದಿನ ಗ್ರಾಮೀಣ ಆಸ್ತಿಕ ಮನಸ್ಸು, ಈಗಿನ ನಮ್ಮ ಹಾಗೆ, ಕೇವಲ ಮಾನವಕೇಂದ್ರಿತವಾದ್ದಲ್ಲ: ಸಸ್ಯ–ಪ್ರಾಣಿ–ಮನುಷ್ಯ ಭೇದಗಳನ್ನು ವಿಂಗಡಿಸದೆ, ಎಲ್ಲಾ ಜೀವಿಗಳನ್ನು ಹಾಗೂ ಎಲ್ಲಾ ಜೀವಿಗಳ ಎಲ್ಲ ಅನುಭವಗಳನ್ನು ಸಮಾನವಾಗಿ ಕಾಣಬಲ್ಲಂಥ ಮನಸ್ಸಾಗಿತ್ತು. ಹಾಗೆಯೇ 'ಗೋವಿನ ಕಥೆ' ಯನ್ನು ಹೇಳುವ ಮೂಲಕವಾಗಿ ಈ ಕವಿತೆಯು, ಶ್ರೋತೃಗಳಿಗೆ ಸಮಸ್ತಜೀವ ಸಮದೃಷ್ಟಿಯನ್ನು ಜ್ಞಾಪಿಸುತ್ತ ಆ ಮಾನಸಿಕ ದೀಕ್ಷೆ ಕೊಡುತ್ತದೆ. **ಹೀಗೆ 'ಗೋವಿನ ಹಾಡು' ಕನ್ನಡ ಕುಲದೈವದ ಒಂದು ಪುಟ್ಟ ವಿಗ್ರಹ ಎನ್ನಬಹುದು.** ( ಕೃಪೆ: **'ಆಯ್ದ ಲೇಖನಗಳು'** –ಕೆ.ವಿ.ಸುಬ್ಬಣ್ಣ)